ನಿಮ್ಮೊಡನೆ

# ಇದು ಪೂರ್ವಗ್ರಹಗಳಿಂದ ಹೊರಬರುವ ಸಮಯ...

**ಲೈಂಗಿಕ ವೃತ್ತಿಯಲ್ಲಿ ತೊಡಗಿಕೊಂಡಿರುವ ಕಾರಣದಿಂದ ಅವರ ಮಕ್ಕಳು ತಾಯಿಯ ಮಮತೆ ಮತ್ತು ಆರೈಕೆಯಿಂದ ವಂಚಿತವಾಗಬಾರದು ಎನ್ನುವ ಸುಪ್ರೀಂ ಕೋರ್ಟ್‌ನ ಅಭಿಪ್ರಾಯ ಮಾತೃತ್ವದ ನೆಲೆಗಟ್ಟಿನಲ್ಲಿ ಮೂಡಿರುವಂತಹದ್ದು. ಇತರ ಮಕ್ಕಳಂತೆಯೇ ಲೈಂಗಿಕ ಕಾರ್ಯಕರ್ತೆಯರ ಮಕ್ಕಳಿಗೂ ಘನತೆಯ ಬದುಕು ನಡೆಸುವ ಹಕ್ಕಿದೆ.**



ಈಶ್ವರ್

ಲೈಂಗಿಕ ಕಾರ್ಯಕರ್ತೆಯರನ್ನು ಗೌರವದಿಂದ ನಡೆಸಿಕೊಳ್ಳುವ ಹಾಗೂ ಅವರಿಗೆ ಅಗತ್ಯವಿರುವ ಕಾನೂನಿನ ನೆರವು ಮತ್ತು ರಕ್ಷಣೆಯನ್ನು ಒದಗಿಸುವ ಕುರಿತು ಸುಪ್ರೀಂ ಕೋರ್ಟ್ ನೀಡಿರುವ ನಿರ್ದೇಶನ ಚಾರಿತ್ರಿಕವಾದುದು. ಲೈಂಗಿಕ ವೃತ್ತಿಯ ಕುರಿತು ಸಮಾಜದಲ್ಲಿನ ಪೂರ್ವಗ್ರಹಗಳನ್ನು ತಿಳಿಗೊಳಿಸಲು ಪ್ರೇರಣೆ ನೀಡುವಂತಿರುವ ಈ ನಿರ್ದೇಶನ, ಲೈಂಗಿಕವೃತ್ತಿಯ ಕುರಿತ ಕಾನೂನುಗಳ ಚರ್ಚೆ ಮತ್ತು ಪರಿಷ್ಕರಣೆಗೆ ಅನುವು ಮಾಡಿಕೊಡುವಂತಿದೆ.

ಲೈಂಗಿಕ ವೃತ್ತಿಯಲ್ಲಿ ತೊಡಗಿಕೊಂಡ ಹೆಣ್ಣುಮಕ್ಕಳನ್ನು ನಮ್ಮ ಸಮಾಜ ಸಾಮಾನ್ಯವಾಗಿ ಅನುಕಂಪದಿಂದ ನೋಡುತ್ತದೆ ಇಲ್ಲವೇ ಹೇಸಿಗೆಯಿಂದ ನೋಡುತ್ತದೆ. ಈ ಕಪ್ಪುಬಿಳುಪು ಭಾವನೆಗಳ ಹೊರತಾಗಿ, ಲೈಂಗಿಕ ಕಾರ್ಯಕರ್ತೆಯರನ್ನೂ ಮನುಷ್ಯರನ್ನಾಗಿ ನೋಡುವ ಸಹಜ ವರ್ತನೆ ನಮಗೆ ಸಾಧ್ಯವಾಗಬೇಕಿದೆ. ಅಂಥದೊಂದು ಸಾಧ್ಯತೆಗೆ ಸುಪ್ರೀಂ ಕೋರ್ಟ್ ಅವಕಾಶ ಮಾಡಿಕೊಟ್ಟಿದೆ. ಸುಪ್ರೀಂ ಕೋರ್ಟ್ ನಿರ್ದೇಶನದ ಟಿಪ್ಪಣಿಗಳು ಮುಖ್ಯವಾಗಿ ಪೊಲೀಸ್ ಇಲಾಖೆಗೆ ಸಂಬಂಧಿಸಿದ್ದರೂ, ಆ ಮಾತುಗಳಲ್ಲಿ ಸಮಾಜದ ಆತ್ಮವಿಮರ್ಶೆಗೆ ಕಾರಣವಾಗುವ ಅಂಶಗಳೂ ಇವೆ.

ಲೈಂಗಿಕ ವೃತ್ತಿಯಲ್ಲಿನ ಮಹಿಳೆಯರು ಸಮಾಜಕ್ಕೆ ಶಾಪ ಎಂದು ಪರಿಗಣಿಸುವವರು ಸಾಕಷ್ಟಿದ್ದಾರೆ. ಆ ಪೂರ್ವಗ್ರಹದಿಂದಲೇ ಲೈಂಗಿಕ ಕಾರ್ಯಕರ್ತೆಯರ ವಿಷಯದಲ್ಲಿ ಪೊಲೀಸರು ಬಹಳಷ್ಟು ಸಂದರ್ಭದಲ್ಲಿ ಒರಟಾಗಿ, ಅಸೂಕ್ಷ್ಮವಾಗಿ ವರ್ತಿಸುತ್ತಾರೆ. ವೇಶ್ಯಾವಾಟಿಕೆಗಳ ಮೇಲೆ ನಡೆಯುವ ದಾಳಿಗಳು ಹಾಗೂ ಆ ದಾಳಿಗಳಲ್ಲಿ ಸಿಕ್ಕಿಬೀಳುವ ಹೆಣ್ಣುಮಕ್ಕಳ ಪಡಿಪಾಟಲು ಮಾಧ್ಯಮಗಳ ಪಾಲಿಗೆ ರಂಜಕ ಘಟನೆಗಳಾಗುತ್ತವೆ. ಇಂಥ ನಡವಳಿಕೆಗಳ ಬಗ್ಗೆ ಸುಪ್ರೀಂ ಕೋರ್ಟ್ ಲಗಾಮು ಹಾಕಲು ಮುಂದಾಗಿದೆ. ಲೈಂಗಿಕ ವೃತ್ತಿಯನ್ನು 'ವೃತ್ತಿ' ಎಂದು ಸ್ಪಷ್ಟಪಡಿಸಿರುವುದರ ಜೊತೆಗೆ, ಆ ವೃತ್ತಿಯಲ್ಲಿ ತೊಡಗಿಕೊಂಡ ಹೆಣ್ಣುಮಕ್ಕಳನ್ನು ಬಂಧಿಸುವಂತಿಲ್ಲ, ಅವರಿಗೆ ದಂಡ ವಿಧಿಸುವಂತಿಲ್ಲ ಎಂದು ಹೇಳಿದೆ. ದಾಳಿ, ಬಂಧನ ಮತ್ತು ಸಂರಕ್ಷಣೆಯ ಸಂದರ್ಭಗಳಲ್ಲಿ ಲೈಂಗಿಕ ಕಾರ್ಯಕರ್ತೆಯರ ಗುರುತು ಬಹಿರಂಗವಾಗದಂತೆ ಮಾಧ್ಯಮ ಎಲ್ಲ ರೀತಿಯ ಎಚ್ಚರಿಕೆಯನ್ನು ಕೈಗೊಳ್ಳಬೇಕು ಎಂದು ಎಚ್ಚರಿಕೆಯ ಕಿವಿಮಾತನ್ನೂ ಹೇಳಿದೆ.

ಲೈಂಗಿಕ ಕಾರ್ಯಕರ್ತರು ವಯಸ್ಕರಾಗಿದ್ದು, ಸ್ವ ಇಚ್ಛೆಯಿಂದ ಲೈಂಗಿಕ ವೃತ್ತಿಯಲ್ಲಿ ತೊಡಗಿಕೊಂಡಿದ್ದರೆ ಅವರ ವಿರುದ್ಧ ಯಾವುದೇ ಕಾನೂನು ಕ್ರಮ ಕೈಗೊಳ್ಳುವಂತಿಲ್ಲ ಎಂದು ಹೇಳಿರುವ ಸುಪ್ರೀಂ ಕೋರ್ಟ್, ಸಂವಿಧಾನದ 21ನೇ ವಿಧಿಯ ಪ್ರಕಾರ, ದೇಶದ ಪ್ರತಿಯೊಬ್ಬ ವ್ಯಕ್ತಿಯೂ ಘನತೆಯ ಬದುಕನ್ನು ಹೊಂದುವ ಹಕ್ಕು ಹೊಂದಿರುವುದನ್ನು ನೆನಪಿಸಿದೆ.

ವೇಶ್ಯೆಯರನ್ನು ಗೌರವದಿಂದ ನಡೆಸಿಕೊಳ್ಳಬೇಕು ಎಂದು ಪೊಲೀಸ್ ಇಲಾಖೆಗೆ ಸುಪ್ರೀಂ ಕೋರ್ಟ್ ತೀರ್ಪು ಅಧಿಕಾರಶಾಹಿಯನ್ನು ಹಾಗೂ ಅಸೂಕ್ಷ್ಮ ಮನಸ್ಸುಗಳನ್ನು ಮಾನವೀಯಗೊಳಿಸುವ ಪ್ರಯತ್ನವಾಗಿದೆ. ಲೈಂಗಿಕ ಸಂತ್ರಸ್ತರಿಗೆ ದೊರೆಯುವ ಎಲ್ಲ ಸವಲತ್ತುಗಳನ್ನು ಲೈಂಗಿಕ ಕಾರ್ಯಕರ್ತೆಯರಿಗೂ ದೊರಕಿಸಿಕೊಡಬೇಕೆನ್ನುವ ನಿರ್ದೇಶನಕ್ಕೆ ವಿಶೇಷ ಮಹತ್ವವಿದೆ. ಬಹುತೇಕ ಸಂದರ್ಭಗಳಲ್ಲಿ ಪೊಲೀಸ್ ಇಲಾಖೆ ವೇಶ್ಯೆಯರನ್ನು ಒರಟಾಗಿ ನಡೆಸಿಕೊಳ್ಳುತ್ತದೆ. ನೈತಿಕತೆಯ ಕನ್ನಡಕದಲ್ಲಿ ಅವರನ್ನು ಕೀಳಾಗಿ ನೋಡುತ್ತದೆ. ನಾಗರಿಕ ವ್ಯವಸ್ಥೆಯಲ್ಲಿ ಇಂಥ ಅಸೂಕ್ಷ್ಮ ನಡವಳಿಕೆಗಳಿಗೆ ಅವಕಾಶ ಇರಬಾರದು. ವೇಶ್ಯಾವಾಟಿಕೆಯಿಂದ ಲಜ್ಜೆಪಡುವಂತಿದ್ದರೆ ಅದಕ್ಕೆ ಕಾರಣವಾದ ಸಮಾಜ ತಲೆತಗ್ಗಿಸಬೇಕೇ ಹೊರತು, ಆ ವೃತ್ತಿಯಲ್ಲಿ ತೊಡಗಿಕೊಂಡಿರುವ ಹೆಣ್ಣಲ್ಲ.

ಲೈಂಗಿಕ ಕಾರ್ಯಕರ್ತೆಯರು ತಮ್ಮ ವಿರುದ್ಧ ಲೈಂಗಿಕ ದೌರ್ಜನ್ಯ ನಡೆದ ಸಂದರ್ಭಗಳಲ್ಲಿ ದೂರು ನೀಡಿದಾಗ, ಪ್ರಕರಣವನ್ನು ದಾಖಲಿಸಿಕೊಳ್ಳುವ ನಿಟ್ಟಿನಲ್ಲಿ ಪೊಲೀಸ್ ಇಲಾಖೆ ತಾರತಮ್ಯ ಮಾಡುವಂತಿಲ್ಲ; ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಸಂದರ್ಭದಲ್ಲಿ ವೈದ್ಯಕೀಯ ಮತ್ತು ಕಾನೂನು ನೆರವು ತಕ್ಷಣಕ್ಕೆ ದೊರೆಯಬೇಕು ಎಂದು ಹೇಳಿರುವ ನ್ಯಾಯಪೀಠ, ಲೈಂಗಿಕ ಕಾರ್ಯಕರ್ತೆಯರನ್ನು ಪೊಲೀಸರು ಕ್ರೌರ್ಯದಿಂದ ನಡೆಸಿಕೊಂಡಿರುವ ಹಲವು ಪ್ರಕರಣಗಳನ್ನು ಗಮನಿಸಿರುವುದಾಗಿಯೂ ಹೇಳಿದೆ.

ಲೈಂಗಿಕ ವೃತ್ತಿಯಲ್ಲಿ ತೊಡಗಿಕೊಂಡಿರುವ ಕಾರಣದಿಂದಾಗಿ, ಅವರ ಮಕ್ಕಳು ತಾಯಿಯ ಮಮತೆ ಮತ್ತು ಆರೈಕೆಯಿಂದ ವಂಚಿತವಾಗಬಾರದು ಎನ್ನುವ ಅಭಿಪ್ರಾಯವಂತೂ ಮಾತೃತ್ವದ ನೆಲೆಗಟ್ಟಿನಲ್ಲಿ ಮೂಡಿರುವಂತಹದ್ದು. ಲೈಂಗಿಕ ಕಾರ್ಯಕರ್ತೆಯರ ಮಕ್ಕಳು ಎಲ್ಲ ಮಕ್ಕಳಂತೆಯೇ ಘನತೆಯ ಬದುಕು ನಡೆಸುವ ಹಕ್ಕನ್ನು ಸಹಜವಾಗಿಯೇ ಹೊಂದಿರುತ್ತಾರೆ. ಆ ಹಕ್ಕನ್ನು ನಿರಾಕರಿಸಿ, ಲೈಂಗಿಕ ಕಾರ್ಯಕರ್ತೆಯರ ಮಕ್ಕಳನ್ನು ಕಡೆಗಣ್ಣಿಂದ ನೋಡುವುದನ್ನು ಒಪ್ಪಲಾಗದು.

ಲೈಂಗಿಕ ವೃತ್ತಿಯ ಬಗ್ಗೆ ಸುಪ್ರೀಂ ಕೋರ್ಟ್‌ನ ನಿಲುವು ಕಾರ್ಯರೂಪಕ್ಕೆ ಬರುವಲ್ಲಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೈಜೋಡಿಸಬೇಕಾಗಿದೆ. ಲೈಂಗಿಕ ಕಾರ್ಯಕರ್ತರಿಗೆ ಸಂಬಂಧಿಸಿದ ಕಾನೂನುಗಳ ಸುಧಾರಣೆಯಾಗುವ ನಿಟ್ಟಿನಲ್ಲಿ ವ್ಯಾಪಕ ಚರ್ಚೆ ನಡೆಯಬೇಕಾಗಿದೆ.

■ **ರಘುನಾಥ ಚ.ಹ.**